ಆ) ಕಳೆದ ಮೂರು ವರ್ಷಗಳಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಿಗೆ ಹಂಚಿಕೆಯಾಗುವ ಮೊತ್ತದ ವಿವರಗಳು ಈ ಕೆಳಗಿನಂತಿವೆ :

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಗಳ ವಿವರ	2006–07	2007–08	2008–09
1	ಗುಲಬರ್ಗಾ	2951.81	2121.54	2761.00
2	ಬೀದರ್	1480.06	1547.80	1562.96
3	ರಾಯಚೂರು	1552.41	1757.64	1278.78
4	ಕೊಪ್ಪಳ	1002.71	883.22	987.25
5	ಬಳ್ಳಾರಿ	1277.48	1289.43	1331.87
6	ದಾವಣಗೆರೆ	467.46	153.44	249.93
	ಒಟ್ಟು	**8582.00**	**7753.07**	**8171.79**

ಇ) ಇಲ್ಲ.

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಅನುದಾನವನ್ನು ಸಮನಾಗಿ ಹಂಚಿಕೆ ಮಾಡುವುದರಿಂದ ಹಾಗೂ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ಮುಂಗಡ ಹಣವನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡುತ್ತಿರುವುದರಿಂದ ತಾರತಮ್ಯಕ್ಕೆ ಅವಕಾಶವಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಯಚೂರು ಜಿಲ್ಲೆಗೆ ನೀರಾವರಿ ಕಾಮಗಾರಿಗಳ ಅನುಮೋದನೆ ನೀಡಿರುವುದು

56 (185) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಗೆ 2008–09 ಮತ್ತು 2009–10ನೇ ಸಾಲಿನಲ್ಲಿ ಯಾವ ಯಾವ ನೀರಾವರಿ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ (ವರ್ಷ ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಮೇಲ್ಕಂಡ ಸಾಲಿನಲ್ಲಿ ರಾಯಚೂರು ಜಿಲ್ಲೆಯ ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ (ವರ್ಷ ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಇ) ರಾಯಚೂರು ಜಿಲ್ಲೆಯಲ್ಲಿ ಮೇಲ್ಕಂಡ ಸಾಲಿನಲ್ಲಿ ಕೈಗೊಂಡಿರುವ ನೀರಾವರಿ ಕಾಮಗಾರಿಗಳು ಯಾವ ಹಂತದಲ್ಲಿವೆ; ಈ ಕಾಮಗಾರಿಗಳ ಕಾರ್ಯವು ಕೆಲವು ಭಾಗಗಳಲ್ಲಿ ಸ್ಥಗಿತಗೊಂಡಿರುವುದು ಮತ್ತು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸ್ಥಗಿತಗೊಂಡಿರುವ ಮತ್ತು ವಿಳಂಬವಾಗುತ್ತಿರುವ ಕಾಮಗಾರಿಗಳು ಯಾವುವು (ವಿವರಗಳನ್ನು ನೀಡುವುದು);

ಉ) ಸ್ಥಗಿತ ಗೊಂಡಿರುವ ಮತ್ತು ವಿಳಂಬವಾಗುತ್ತಿರುವ ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಊ) ಹಾಗಿದ್ದಲ್ಲಿ, ಮೇಲ್ಕಂಡ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು (ವಿವರಗಳನ್ನು ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) 2008–09 ಮತ್ತು 2009–10ನೇ ಸಾಲಿನಲ್ಲಿ ರಾಯಚೂರು ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ನೀರಾವರಿ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ.

ಕ್ರ.ಸಂ.	ಯೋಜನೆ	2008–09 (ಕಾಮಗಾರಿಗಳ ಸಂಖ್ಯೆ)	2009–10 (ಕಾಮಗಾರಿಗಳ ಸಂಖ್ಯೆ)
1	ತುಂಗಭದ್ರಾ ಎಡದಂಡೆ ಕಾಲುವೆಯ ಆಧುನೀಕರಣ	46	46
2	ತುಂಗಭದ್ರ ಎಡದಂಡೆ ಕಾಲುವೆಯ ವಿತರಣಾ ಕಾಲುವೆಗಳ ಆಧುನೀಕರಣ	65	274
3	ವಿಜಯನಗರ ಕಾಲುವೆಗಳು	–	04
4	ಪಿಕಪ್‌ಗಳು	02	02

ಆ) ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನದ ವಿವರ ಇಂತಿದೆ.

ಮೊತ್ತ ಲಕ್ಷಗಳಲ್ಲಿ

ಕ್ರ.ಸಂ.	ಯೋಜನೆ	2008–09	2009–10
1	ತುಂಗಭದ್ರಾ ಎಡದಂಡೆ ಕಾಲುವೆಯ ಆಧುನೀಕರಣ ಕಾಮಗಾರಿಗಳು	362.04	2901.55
2	ತುಂಗಭದ್ರಾ ಎಡದಂಡೆ ಕಾಲುವೆಯ ವಿತರಣಾ ಕಾಲುವೆಗಳ ಆಧುನೀಕರಣ ಕಾಮಗಾರಿಗಳು	248.64	3421.38
3	ವಿಜಯನಗರ ಕಾಲುವೆಗಳು	31.40	49.69
4	ಪಿಕಪ್‌ಗಳು	92.45	38.04
5	ಕಾತರಕಿ ಏ.ನೀ.ಯೋಜನೆ	11.00	3.33
6	ಬಯಲ್ ಮರ್ಚಡ್ ಏ.ನೀ.ಯೋ	10.00	3.33

ಇ)

1) 2008–09ನೇ ಸಾಲಿನಲ್ಲಿ ಕೈಗೊಂಡ ಆಧುನೀಕರಣ ಕಾಮಗಾರಿಗಳು ಪೂರ್ಣಗೊಂಡಿವೆ. 2009–10ನೇ ಸಾಲಿನಲ್ಲಿ ಮುಖ್ಯ ಕಾಲುವೆಯಲ್ಲಿ ಕೈಗೊಂಡಿರುವ ಆಧುನೀಕರಣ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ. ವಿತರಣಾ ಕಾಲುವೆಗಳ ಪ್ಯಾಕೇಜ್ ಕಾಮಗಾರಿಗಳಲ್ಲಿ ವಿಳಂಬವಾಗಿರುತ್ತದೆ.

2) ಪಿಕಪ್‌ಗಳು : ಸಿಂಧನೂರು ತಾಲ್ಲೂಕಿನಲ್ಲಿ ಬರುವ ಗೋರೆಬಾಳ ಪಿಕಪ್ ಮುಕ್ತಾಯದ ಹಂತದಲ್ಲಿದೆ. ಮಾನ್ವಿ ತಾಲ್ಲೂಕಿನಲ್ಲಿ ಬರುವ ಸೀಕಲ್ ನಾಲಾ ಪಿಕಪ್ ಬಾಡಿ ವಾಲ್ ಪೂರ್ಣಗೊಂಡಿದೆ. ಮತ್ತು 3 ಕಿ.ಮೀ. ಕಾಲುವೆಯು ಪೂರ್ಣಗೊಂಡಿರುತ್ತದೆ. ಉಳಿದ 5 ಕಿ.ಮೀ. ಕಾಲುವೆಯನ್ನು 2010–11 ರಲ್ಲಿ ಕೈಗೊಳ್ಳಲಾಗುವುದು.

3) ಕಾತರಕಿ ಹಾಗೂ ಬಯಲ್ ಮರ್ಚಡ್ ಏ.ನೀ.ಯೋಜನೆಗಳ ಕಾಮಗಾರಿಗಳು ಪೂರ್ಣಗೊಂಡಿದ್ದು ಚಾಲನೆಗೊಳಿಸಬೇಕಾಗಿದೆ.

4) ವಿಜಯನಗರ ಕಾಲುವೆಯಲ್ಲಿ 2009–10ರಲ್ಲಿ ಕೈಗೊಂಡಿರುವ ಆಧುನೀಕರಣ ಕಾಮಗಾರಿಗಳು ಮುಗಿಯುವ ಹಂತದಲ್ಲಿದೆ.

ಈ) ವಿಳಂಬವಾಗಿರುವ ಆಧುನೀಕರಣ ಕಾಮಗಾರಿಗಳ ವಿವರಗಳನ್ನು ಅನುಬಂಧ(1) ರಲ್ಲಿ ನೀಡಲಾಗಿದೆ.

ಗೋರೆಬಾಳ್ ಪಿಕಪ್ ಮತ್ತು ಸೀಕಲ್ ನಾಲಾ ಪಿಕಪ್ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾಗಿದೆ.

ಉ) ಕ್ರಮ ಕೈಗೊಳ್ಳಲಾಗುವುದು.

ಊ) ಈ ಕಾಮಗಾರಿಗಳನ್ನು 2010–11ನೇ ಸಾಲಿನ ಕಾರ್ಯ ಯೋಜನೆಯೊಂದಿಗೆ ಆದ್ಯತೆಯ ಮೇರೆ ಪೂರ್ಣಗೊಳಿಸಲಾಗುವುದು.

ಅನುಬಂಧ (1)

ವಿಳಂಬವಾಗಿರುವ ಆಧುನೀಕರಣ ಕಾಮಗಾರಿಗಳ ವಿವರಗಳು

Sindhanoor Division :

1. Providing CC Lining with mechanical paver (R.C.C Lining in banking & scoured reaches) from Km: 0.00 to 6.15 Km including C D works of D-36 of TLBC.
2. Providing CC Lining with mechanical paver (R.C.C lining in banking & scoured reaches) from Km: 0.00 to 8.85 Km of Distributory -54 of TLBC.

Sirwar Division :

1. Providing RCC Lining using mechanical paver strengthening to RCC trough culvert(aquaduct) inner strengthening work from Km, 127 to 142 (from Ch.4250 to 4776) (In selected reaches).
2. Providing RCC Lining using mechanical paver, Improvements to head sluice, inner strengthening work, improvements to RCC trough culvert aquaduct, RCC Slab culvert from Km. 143 to Km. 153 (from Ch.4795 to 5201.50) In selected reaches)

3. Remodelling of canal section & improvements to PO's and PCC drop CD work, restoration of design section & providing CC lining using mechanical paver in Distry No.76 from KM.13.00 to 20.00 of TLBC.
4. Restoration of design section providing CC lining using mechanical paver in Distry No. 85 from Km. 0.00 to 4.00 of TLBC.
5. Restoration of design section providing CC lining using mechanical paver in Distry No. 89 from Km. 0.00 to 9.00 of TLBC.
6. Remodellng of canal section improvements to PCC drops CD work and providing CC lining from Km 0.00 to 6.00 of SD 76/1 of D/76 of TLBC.
7. Remodelling of canal section improvements to PCC drops CD work and providing CC lining from KM 0.00 to 3.00 of SD 76/2 & SD 76/4 KM 0 to 1 SD 76/5 of D/76 of TLBC.
8. Remodelling of canal section improvements to PCC drops CD work and providing CC lining from Km 0.00 to 3.00 of SD 76/6 D/76 of TLBC.

Yeramarus Division :

1. Package- I – Inner strengthening work with RCC lining with mechanical paver from Ch.6336.00 to 6357.00, Ch.6449.00 to 6478.00 and providing RCC lining with mechanical paver from Ch.6074.00 to 6104.00 of TLBC main canal.
2. Package – II – Providing CC lining with mechanical paver including improvements to CD's from Ch. 10.0 to 33.0, 34 to 65, 66 to 120 in Dy-98 & providing CC lining from Ch.0.0 to 30 and construction of RCC drops & PO's in Sub-distributory 2L and 3L of Dy-98 of TLBC.

3. Package – III – Providing CC Lining with mechanical paver from Ch. 11.0 to 156, 209 to 232, 248 to 265 & repairs to drops at Ch. 102, 112, 132, 149, 163, 180, 196, 211, 239 & CD's at Ch.114, 124, 172, 197 & construction of PO's at Ch. 123, 147, 159, 183, 210, 231, 249, 255, 265 in distry-99 of TLBC.
4. Package – IV – Providing CC Lining with mechanical paver, construction of RCC PO's and repairs to drops and CD's in Km 1.00 to 4.00 and in Km. 4.00 to 15.00 (In selected reaches) in Dy-102 of TLBC.
5. providing CC Lining with mechanical paver from Ch.40 to 52, Ch.53 to 66, Ch.114 to 124, Ch.126 to 141, Ch. 144 to 175, Ch.203 to 207, Ch.209 to 218 & CC lining from Ch.329 to 344 in Ry-102 A of TLBC.

ರಾಯಚೂರಿನ ಸಿಂಧನೂರು ತಾಲ್ಲೂಕಿನಲ್ಲಿ ಪುನರ್ ವಸತಿಗಾಗಿ ಆಯ್ಕೆಯಾಗಿರುವ ಗ್ರಾಮಗಳು

57 (186) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನಲ್ಲಿ ಪುನರ್ವಸತಿಗಾಗಿ ಆಯ್ಕೆಯಾಗಿರುವ ಗ್ರಾಮಗಳು ಎಷ್ಟು ಮತ್ತು ಅವು ಯಾವುವು;

ಆ) ಪುನರ್ವಸತಿ ಗ್ರಾಮಗಳಲ್ಲಿ ಮನೆಗಳನ್ನು ನಿರ್ಮಿಸುವ ಕಾಮಗಾರಿ ಪ್ರಾರಂಭವಾಗಿದೆಯೇ;

ಇ) ಹಾಗಿದ್ದಲ್ಲಿ, ಯಾವ ಯಾವ ಗ್ರಾಮಗಳಲ್ಲಿ ಎಷ್ಟೆಷ್ಟು ಮನೆಗಳನ್ನು ನಿರ್ಮಿಸಲಾಗಿದೆ (ವಿವರಗಳನ್ನು ನೀಡುವುದು);

ಈ) ಪುನರ್ವಸತಿಗಾಗಿ ಆಯ್ಕೆಯಾಗಿರುವ ಕೆಲವು ಗ್ರಾಮಗಳಲ್ಲಿ ಮನೆ ನಿರ್ಮಾಣದ ಕಾರ್ಯ ಇನ್ನೂ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಆ ಗ್ರಾಮಗಳಲ್ಲಿ ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;